**ಮೂ.ದಾ.ನಂ. 110/2017**

**ಡಿ.ಡಬ್ಲ್ಯು 2**

(ಇಂದು ದಿನಾಂಕ: **08-12-2025** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ ಶ್ರೀ.ಎಮ್.ಎನ್.ಎಸ್. ವಕೀಲರಿಂದಃ**

ನಾನು ಸರ್ವೆ ನಂಬರ 745 ಹಿಸ್ಸಾ 1 ನ್ನು ತೆಗೆದುಕೊಂಡು ಹೋದ ದಾಖಲೆಗಳ ಕುರಿತಾಗಿ ನಿಡಿ1 ರಲ್ಲಿ ನಮೂದಿಸಿರುತ್ತೇನೆ. ನಿಡಿ1 ರಲ್ಲಿ ಮೂಲ ಟಿಪ್ಪಣೆ ಎಂದು ನಮೂದು ಮಾಡಿದ್ದು, ಪಿಟಿ ಶೀಟ್ ಹಾಗೂ ಇನ್ನಿತರ ದಾಖಲೆಗಳ ಕುರಿತಾಗಿ ನಮೂದು ಮಾಡಲಿಲ್ಲ ಎಂದರೆ ಸಾಕ್ಷಿಯು ಅದಕ್ಕೆ ಸಂಬಂಧಿಸಿದಂತೆ ನಮೂನೆಗಳು ಇರುವುದಿಲ್ಲ ಎಂದು ನುಡಿಯುತ್ತಾರೆ. ಆ ಕಾರಣದಿಂದ ವಾದಿಯರು ಈ ಟಿಪ್ಪಣಿ ಹಾಗೂ ಮೂಲ ಹಿಸ್ಸಾ ನಕ್ಷೆ ಹಾಗೂ ಗ್ರಾಮ ನಕ್ಷೆಗಳನ್ನು ಪರಿಗಣನೆ ಮಾಡಿ ಆಳತೆ ಮಾಡಬೇಕು ಎಂದು ನನಗೆ ಹೇಳಿರುತ್ತಾರೆ ಎಂದರೆ ಸರಿಯಲ್ಲ. ವಾದಿಯರ ಯಾವುದೇ ಹೇಳಿಕೆಗಳನ್ನು ಪರಿಗಣನೆಗೆ ತೆಗೆದುಕೊಳ್ಳದೇ ಸರ್ವೆ ನಂಬರ 745 ಹಿಸ್ಸಾ 1 ನ್ನು ಆಳತೆ ಮಾಡಿದ ಬಗ್ಗೆ ದಿನಾಂಕಃ 29/11/2017 ರಂದು ಎಡಿಎಲ್ಆರ್ ಕುಮಟಾ ಇವರಿಗೆ ತಕಾರಾರನ್ನು ನೀಡಿದ್ದರು ಎಂದರೆ ಸಾಕ್ಷಿಯು ನನಗೆ ತಿಳಿದಿರುವುದಿಲ್ಲ ಕಛೇರಿಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ.

ದಿನಾಂಕಃ 28/11/2017 ರಂದು ಆಳತೆ ಬರುವ ಪೂರ್ವ ದಿನಾಂಕಃ 23/11/2017 ರಂದು ಎಡಿಎಲ್ಆರ್ ಕುಮಟಾ ಇವರಿಗೆ ಸರ್ವೆ ನಂಬರ 745 ಹಿಸ್ಸಾ 1 ಹಾಗೂ ವಾದಿಯರ ಹಕಿನ ಸರ್ವೆ ನಂಬರ 744 ಹಿಸ್ಸಾ 1 ರ ಹಿಸ್ಸಾ ನಕಾಶೆಯಲ್ಲಿ ವ್ಯತ್ಯಾಸ ಇರುವುದರಿಂದ ಆಳತೆ ಮಾಡಲು ತಕರಾರು ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಸದ್ರಿ ತಕರಾರನ್ನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ಸರ್ವೆ ಮಾಡುವ ಪೂರ್ವದಲ್ಲಿ ತಕಾರಾರು ಅರ್ಜಿ ಬಂದಂತಹ ಸಂದರ್ಭದಲ್ಲಿ ನಮ್ಮ ಮೇಲಾಧಿಕಾರಿಗಳು

ನಮಗೆ ತಿಳಿಸಿರುತ್ತಾರೆ ಎಂದರೆ ಸಾಕ್ಷಿಯು ಸದ್ರಿ ತಕರಾರು ಸಕಾರಣ ಹೊಂದಿದ್ದರೆ ನಮಗೆ ತಿಳಿಸುತ್ತಾರೆ ಎಂದು ನುಡಿಯುತ್ತಾರೆ. ಈ ರೀತಿಯಾಗಿ ತಕರಾರು ಬಂದ ವಿಷಯವನ್ನು ನನಗೆ ಎಡಿಎಲ್‌ಆರ್ ಕುಮಟಾ ಇವರು ತಿಳಿಸಿದ್ದರೂ ಸಹ ನಾನು ಕಾನೂನು ಬಾಹಿರವಾಗಿ ಆಳತೆ ಕಾರ್ಯವನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ತಕರಾರಿನ ವಿಷಯವನ್ನು ನಮ್ಮ ಮೇಲಾಧಿಕಾರಿಗಳು ತಿಳಿಸಿದ್ದರೂ ಸಹ ತಿಳಿಸಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕಃ 28/11/2017 ರಂದು ನನ್ನ ಜೊತೆ ಆಳತೆ ಕಾರ್ಯಕ್ಕೆ ಇನ್ನೊಬ್ಬರು ಬಾಂದು ಜವಾನರು ಬಂದಿದ್ದರು ಎಂದರೆ ಸರಿ. ಅವರ ಹೆಸರು ನನಗೆ ಈಗ ನೆನಪಿಲ್ಲ. ನನ್ನ ಜೊತೆಗೆ ಬಂದವರು ಲವ ಚವ್ಹಾನ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿನಾಂಕಃ 18/11/2017 ರಂದು ಆಳತೆ ಕಾರ್ಯಕ್ಕಾಗಿ ಲವ ಚವ್ಹಾಣ ರವರೇ ಬಂದಿದ್ದರು ಎಂದರೆ ನನಗೆ ತಿಳಿದಿಲ್ಲ.

ದಿನಾಂಕಃ 18/11/2017 ರಂದು ನಾನು ಆಳತೆ ಕಾರ್ಯಕ್ಕಾಗಿ ಬಂದಾಗ ಪ್ರತಿವಾದಿಯರು ದಾವಾ ಆಸ್ತಿಯ ಗಡಿಯಲ್ಲಿ ಇದ್ದ ಬೇಲಿಯನ್ನು ಕಿತ್ತು ತೆಗೆಯಲು ಪ್ರಯತ್ನ ಮಾಡಿದ ಬಗ್ಗೆ ನನಗೆ ನೆನಪಿಲ್ಲ. ದಿನಾಂಕಃ 28/11/2017 ರಂದು ಕೂಡ ಪ್ರತಿವಾದಿಯರು ದಾವಾ ಆಸ್ತಿಯ ಗಡಿಯಲ್ಲಿ ಇದ್ದ ಬೇಲಿಯನ್ನು ಕಿತ್ತು ತೆಗೆದಿದ್ದಾರೆ ಎಂದರೆ ಸರಿಯಲ್ಲ. ಈ ಕುರಿತಾಗಿ ವಾದಿಯು ನನ್ನ ವಿರುದ್ಧ ಹಾಗೂ ಪ್ರತಿವಾದಿಯರ ವಿರುದ್ಧ ಪೊಲೀಸ ಠಾಣೆಯಲ್ಲಿ ಹಾಗೂ ಸಹಾಯಕ ಆಯುಕ್ತರಲ್ಲಿ ದೂರನ್ನು ನೀಡಿದ್ದರು ಎಂದರೆ ನನಗೆ ತಿಳಿದಿಲ್ಲ. ಸದ್ರಿ ದೂರಿನ ಅನ್ವಯ ನನ್ನನ್ನು ಸಹಾಯಕ ಆಯುಕ್ತರ ಕಛೇರಿಯಲ್ಲಿ ಕರೆಸಿರುತ್ತಾರೆ ಎಂದರೆ ಸಾಕ್ಷಿಯು ನನಗೆ ನೆನಪಾಗುತ್ತಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿಯಾಗಿ ನನ್ನ ಜೊತೆ ಬಂದಂತಹ ಲವ ಚವ್ಹಾಣ ಇವರ ವಿರುದ್ಧವೂ ಸಹ ದೂರು ನೀಡಿದ ವಿಚಾರ ನನಗೆ ತಿಳಿದಿಲ್ಲ.

ನಾನು ಹಾಗೂ ಲವ ಚವ್ಹಾಣ ಇವರು ಸದ್ರಿ ದೂರಿನ ಕುರಿತಾಗಿ ಸಹಾಯಕ ಆಯುಕ್ತರ ಕಛೇರಿಯಲ್ಲಿ ನಮ್ಮ ಹೇಳಿಕೆಯನ್ನು ನೀಡಿದ್ದೇವೆ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಈ ದೂರನ್ನು ವಿಚಾರಣೆ ಮಾಡಿ ನನಗೆ ಸಹಾಯಕ ಆಯುಕ್ತರು ಸಮಜಾಯಿಸಿ ಕೇಳಿ ನೋಟಿಸು ನೀಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ.

ದಿನಾಂಕಃ 28/11/2017 ರಂದು ತಯಾರಿಸಿದ ನಕ್ಷೆಯನ್ನು ಅನುಮೋದನೆ ನೀಡಬಾರದು ಎಂದು ವಾದಿಯು ದಿನಾಂಕಃ 21/10/2019 ರಂದು ನನ್ನ ಮೇಲಾಧಿಕಾರಿಗಳಿಗೆ ಲಿಖಿತ ತಕರಾರನ್ನು ಸಲ್ಲಿಸಿದ ಕುರಿತಾಗಿ ನನಗೆ ಮಾಹಿತಿ ಇರುವುದಿಲ್ಲ. ಅದನ್ನು ಕೂಡ ಪರಿಗಣಿಸದೇ ಎಡಿಎಲ್‌ಆರ್, ಕುಮಟಾ ರವರು ನಕ್ಷೆಯನ್ನು ಮಂಜೂರು ಮಾಡಿರುವುದರಿಂದ ನಿಡಿ1 ನ್ನು ಪ್ರಶ್ನಿಸಿ ಅದರ ವಿರುದ್ಧ ವಾದಿಯು ಎಡಿಎಲ್‌ಆರ್ ಕಛೇರಿಯಲ್ಲಿ ಮೇಲ್ಮನವಿ ಸಲ್ಲಿಸಿರುವ ವಿಚಾರ ನನಗೆ ತಿಳಿದಿಲ್ಲ. ನಿಡಿ1 ರ ನಕ್ಷೆಯನ್ನು ಪ್ರಶ್ನಿಸಿ, ಮೇಲ್ಮನವಿ ಮಾಡಿರುವುದರಿಂದ ಅದು ಅಂತಿಮತತೆಯನ್ನು ಹೊಂದುತ್ತದೆಯೋ ಎಂದರೆ ಸಾಕ್ಷಿಯು ನಾನು ತಯಾರಿಸಿದ ನಕ್ಷೆಯ ಮೇಲೆ 60 ದಿನಗಳ ಒಳಗೆ ಮೇಲ್ಮನವಿಯನ್ನು ಸಲ್ಲಿಸಿದರೆ ಮಾತ್ರ ಅದು ಅಂತಿಮತೆಯನ್ನು ಹೊಂದುವುದಿಲ್ಲ ಎಂದು ನುಡಿಯುತ್ತಾರೆ.

ಸರ್ವೆ ನಂಬರ 745 ಹಿಸ್ಸಾ 1 ರಲ್ಲಿ ಒಂದು ಕಟ್ಟಡ ಇದೆ ಎಂದರೆ ಸರಿ. ಸರ್ವೆ ನಂಬರ 745 ಹಿಸ್ಸಾ 1 ರ ಮಧ್ಯದಲ್ಲಿ ಪೂರ್ವದಿಂದ ಪಶ್ಚಿಮ ದಿಕ್ಕಿಗೆ ಹೆಗಡೆ ಮಾಸೂರು ರಸ್ತೆ ಹೋಗಿದೆ ಎಂದರೆ ಸರಿ. ಅದರ ಕುರಿತಾಗಿ 1 ಗುಂಟೆ ಖರಾಬ ಕ್ಷೇತ್ರ ಇರುತ್ತದೆ ಎಂದರೆ ಸರಿ. ಆಳತೆ ಕಾಲಕ್ಕೆ ನಾನು ಅದನ್ನು ಪಗಣನೆಗೆ ತೆಗೆದುಕೊಂಡಿಲ್ಲ ಎಂದರೆ ಸಾಕ್ಷಿಯು ಹದ್ದುಬಸ್ತಿನ ಸರ್ವೆಯ ಸಂದರ್ಭದಲ್ಲಿ ಖರಾಬ ಕ್ಷೇತ್ರಗಳನ್ನು ತೋರಿಸುವುದಿಲ್ಲ ಎಂದು ನುಡಿಯುತ್ತಾರೆ. ಆಳತೆ ಕಾಲಕ್ಕೆ ಖರಾಬನ್ನು ಸೇರಿಸಿ ಆಳತೆ

ಮಾಡಿರುತ್ತೇವೆ. ಈ ಆಳತೆ ಕಾಲಕ್ಕೆ ಈ ರೀತಿಯಾಗಿ ಪ್ರತಿವಾದಿಯರು ಕಟ್ಟಿದ ಕಟ್ಟಡವನ್ನು ಹಾಗೂ ಹೆಗಡೆ ಮಾಸುರು ರಸ್ತೆಯನ್ನು ತೋರಿಸಲಿಲ್ಲ ಎಂದರೆ ಸಾಕ್ಷಿಯು ಹದ್ದು ಬಸ್ತು ಸರ್ವೆ ಮಾಡುವ ಸಂದರ್ಭಗಳಲ್ಲಿ ಅವುಗಳನ್ನು ತೋರಿಸುವ ಅವಶ್ಯಕತೆ ಬರುವುದಿಲ್ಲ ಎಂದು ನುಡಿಯುತ್ತಾರೆ. ನಾವು ಹದ್ದುಬಸ್ತು ಸರ್ವೆಯ ಸಂದರ್ಭದಲ್ಲಿ ಸ್ಥಳದಲ್ಲಿ ಇರುವ ವಸ್ತು ಸ್ಥಿತಿಯನ್ನು ತೋರಿಸಬೇಕು ಎಂದರೆ ಸರಿಯಲ್ಲ.

ಸಾಕ್ಷಿಗೆ ನಿಪಿ 7 ನ್ನು ತೋರಿಸಲಾಗಿ ನಾವು ಹದ್ದುಬಸ್ತಿಗೆ ಹೋದಂತಹ ಸಂದರ್ಭದಲ್ಲಿ ಸ್ಥಳದಲ್ಲಿ ಇದ್ದಂತಹ ಕಟ್ಟಡ ಅದೇ ಆಗಿರುತ್ತದಾ ಎಂದರೆ ಸಾಕ್ಷಿಯು ಅದನ್ನು ನನಗೆ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯರು ಕಟ್ಟಿಸಿದ ಇಮಾರತು ಸರ್ವೆ ನಂಬರ 745 ಹಿಸ್ಸಾ 1 ರ ಪೂರ್ವ ದಿಕ್ಕಿನ ಗಡಿಯ ವರೆಗೆ ಕಟ್ಟಿರುತ್ತಾರೆ ಎಂದರೆ ಸಾಕ್ಷಿಯು ಅಲ್ಲಿ ಸ್ವಲ್ಪ ಜಾಗ ಇತ್ತು ಎಂದು ನುಡಿಯುತ್ತಾರೆ. ಪ್ರತಿವಾದಿಯರು ಕಟ್ಟಿದ ಇಮಾರತ ಸರ್ವೆ ನಂಬರ 745 ಹಿಸ್ಸಾ 1 ರ ಪೂರ್ವ ದಿಕ್ಕಿನ ಗಡಿಯವರೆಗೆ ಕಟ್ಟಿದ್ದಾರೆ ಎಂಬುವುದನ್ನು ಹದ್ದು ಬಸ್ತು ನಕಾಶೆಯಲ್ಲಿ ತೋರಿಸಲು ವಾದಿಯರು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

ಇದನ್ನು ಪರಿಗಣಿಸದೇ ನಾನು ಪ್ರತಿವಾದಿಯರ ಆಮಿಷಕ್ಕೆ ಒಳಗಾಗಿ ನಕಾಶೆಯನ್ನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಹಾಗೂ ವಾದಿಯರ ನಡುವೆ ಇದ್ದ ಬೇಲಿಯನ್ನು ಕಿತ್ತು ತೆಗೆಯುವಂತೆ ಪ್ರಚೋದನೆ ನೀಡಿದ್ದೇನೆ ಎಂದರೆ ಸರಿಯಲ್ಲ. ನಿಡಿ1 ನ್ನು ನಾನು ನಮ್ಮ ಕಛೇರಿಯಲ್ಲಿ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ಯಾವುದೇ ನಕಾಶೆಯನ್ನು ತಯಾರಿಸಿಲ್ಲ ಎಂದರೆ ಸರಿಯಲ್ಲ. ನಾವು ಸ್ಥಳದಲ್ಲಿ ತಯಾರಿದ ನಕ್ಷೆ ನಮ್ಮ ಕಛೇರಿಯಲ್ಲಿ ಇರುತ್ತದೆ ಎಂದರೆ ಸರಿ. ನಾನು ಸ್ಥಳದಲ್ಲಿ ಯಾವುದೇ ನಕಾಶೆಯನ್ನು ತಯಾರಿಸಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನಾನು ಅದನ್ನು ನ್ಯಾ

ಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಾನು ಸರ್ವೆ ನಿಯಮಾವಳಿಗೆ ವಿರುದ್ಧವಾಗಿ ಪ್ರತಿವಾದಿಗಳ ಆಮಿಷಕ್ಕೆ ಒಳಗಾಗಿ ನಿಡಿ1 ನ್ನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ.

ನಾನು ಹಾಗೂ ಲವ ಚವ್ಹಾಣ ರವರು ಸೇರಿ ಹಲವಾರು ಹದ್ದುಬಸ್ತು ಹಾಗೂ ಪೋಟ್ ಹಿಸ್ಸಾ ಸರ್ವೆಗಳನ್ನು ಮಾಡಿದ್ದೇವೆ ಎಂದರೆ ಸರಿ. ಸರ್ವೆ ಮಾಡುವಾಗ ಸ್ಥಳದ ಗಡಿ ನಕಾಶೆಯನ್ನು ಬದಲಾಯಿಸಿ ನಾವು ಸರ್ವೆಯನ್ನು ಮಾಡುತ್ತೇವೆ ಎಂಬ ಬಗ್ಗೆ ನಾವು ನಮ್ಮ ಮೇಲಾಧಿಕಾರಿಗಳಿಗೆ ಸಾರ್ವಜನಿಕರಿಂದ ದೂರುಗಳು ಬಂದಿದ್ದವು ಎಂದರೆ ಸರಿಯಲ್ಲ. ಕಾನೂನು ಬಾಹಿರವಾಗಿ ಸರ್ವೆ ನಕಾಶೆಯನ್ನು ಮಾಡುತ್ತಿರುವ ಕುರಿತು ದಿನಾಂಕಃ 03/06/2019 ರ ನಾಗರೀಕ ಪತ್ರಿಕೆಯಲ್ಲಿ ವರದಿಯಾಗಿತ್ತು ಎಂದರೆ ಸಾಕ್ಷಿಯು ನನಗೆ ಈ ಬಗ್ಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ಸದ್ರಿ ದೂರಿನ ಅನ್ವಯ ಲವ ಚವ್ಹಾಣ ಇವರನ್ನು ಎಡಿಎಲ್ ಆರ್ ಕುಮಟಾ ಇವರು ಅಮಾನತ್ತನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದರಿಂದಾಗ ನನ್ನನ್ನು ವರ್ಗಾವಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನಾವು ತಯರರಿಸಿದ ನಿಡಿ1 ಅಂತಿಮತೆಯನ್ನು ಪಡೆಯದೇ ಇರುವುದರಿಂದ ಅದಕ್ಕೆ ಕಾನೂನಿನ ಅಡಿಯಲ್ಲಿ ಮಾನ್ಯತೆ ಇಲ್ಲ ಎಂದರೆ ಸಾಕ್ಷಿಯು ಮೇಲ್ಮನವಿ ಸಲ್ಲಿಸಿದ್ದರೆ ಮಾತ್ರ ಮಾನ್ಯತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ1 ಪ್ರತಿವಾದಿಗೆ ಅನುಕೂಲವಾಗುವಂತೆ ತಯಾರಿಸಿದ ನಕಾಶೆ ಎಂದರೆ ಸರಿಯಲ್ಲ. ಸದ್ರಿ ನಕಾಶೆಯಲ್ಲಿ ತೋರಿಸಿದಂತೆ ವಾದಿಯು ಯಾವುದೇ ಜಾಗವನ್ನು ಅತೀಕ್ರಮಣ ಮಾಡದೇ ಇದ್ದರೂ ಸಹ ಸುಳ್ಳು ನಕಾಶೆಯನ್ನು ತಯಾರಿಸಿ ಸುಳ್ಳು ವರದಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**ಮೂ.ದಾ.ನಂ. 110/2017**

**ಡಿ.ಡಬ್ಲ್ಯು 2**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ